(70)

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ : **2016-17ನೇ** ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಮತ್ತು ಗೊಬ್ಬರ ನಿರ್ವಹಣೆ ಕಾರ್ಯಕ್ರಮ (NBMMP)ದ ಅನುಷ್ಠಾನವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸುವ ಕುರಿತು.

ಓದಲಾಗಿದೆ :
1. ದಿನಾಂಕ 17.05.2016ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಗ್ರಾಮೀಣ ಇಂಧನ ಕಾರ್ಯಕ್ರಮದ ಪರಿಶೀಲನಾ ಸಭೆಯ ನಡವಳಿ.
2. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಅಪಂ ಇಲಾಖೆರವರ ಪತ್ರ ಸಂಖ್ಯೆ ಗ್ರಾಅಪ 841 ಉಖಾಯೋ 2014, ದಿನಾಂಕ 17.10.2016.

## ಪ್ರಸ್ತಾವನೆ

ರಾಷ್ಟ್ರೀಯ ಜೈವಾನಿಲ ಮತ್ತು ಗೊಬ್ಬರ ನಿರ್ವಹಣೆ ಕಾರ್ಯಕ್ರಮವು (NBMMP) ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ರಾಜ್ಯದಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

2015-16ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ನಿಗದಿಪಡಿಸಿದ 16000 ಜೈವಾನಿಲ ಸ್ಥಾವರಗಳ ಭೌತಿಕ ಗುರಿಗೆ ಕೇವಲ 6444 ಜೈವಾನಿಲ ಸ್ಥಾವರಗಳ ಭೌತಿಕ ಪ್ರಗತಿ ಸಾಧಿಸಿದ್ದು, (ಶೇ.40ರಷ್ಟು) ಈ ಪ್ರಗತಿಯ ಹಿನ್ನೆಡೆಗೆ ಇರುವ ಸಾಧಕಬಾಧಕಗಳನ್ನು ಮೇಲೆ (1)ರಲ್ಲಿ ಓದಲಾದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಚರ್ಚಿಸಿ ಕಾರ್ಯಕ್ರಮದ ಸಮರ್ಪಕ ಅನುಷ್ಠಾನದ ಹಿತದೃಷ್ಟಿಯಿಂದ ಪರ್ಯಾಯ ವ್ಯವಸ್ಥೆಯನ್ನು ಕೈಗೊಳ್ಳುವ ಮೂಲಕ ಪೂರ್ಣ ಪ್ರಮಾಣದಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ NBMMPಯನ್ನು MGNREGA Convergence ಮೂಲಕ ಅನುಷ್ಠಾನ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 91 ಜೈಅಯೋ 2016, ಬೆಂಗಳೂರು**
**ದಿನಾಂಕ 09.11.2016.**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ ಹಾಗೂ ಮೇಲೆ (2)ರಲ್ಲಿ ಓದಲಾದಂತೆ 2016-17ನೇ ಸಾಲಿಗೆ ಸಂಬಂಧಿಸಿದಂತೆ 3 ಘನ ಮೀಟರ್ ಸಾಮರ್ಥ್ಯದ ಧೀನಬಂಧು ಮಾದರಿಯ ಜೈವಾನಿಲ ಘಟಕವನ್ನು NBMMP ಮತ್ತು MGNREGA ಧ್ಯೇಯೋದ್ದೇಶಗಳನ್ನು ಅಳವಡಿಸಿಕೊಂಡು MGNREGA Convergence ಮೂಲಕ ಈ ಕೆಳಕಂಡ ಷರತ್ತು ಹಾಗೂ ನಿಬಂಧನೆಗಳೊಂದಿಗೆ ಅನುಷ್ಠಾನಗೊಳಿಸಲು ಆದೇಶಿಸಿದೆ.

**ಷರತ್ತು ಮತ್ತು ನಿಬಂಧನೆಗಳು**

1. NBMMP ಕಾರ್ಯಕ್ರಮದಡಿ ನಿರ್ಮಿಸಲಾಗುವ 3 ಘನ ಮೀಟರ್ ಸಾಮರ್ಥ್ಯದ ಧೀನಬಂಧು ಮಾದರಿಯ ಜೈವಾನಿಲ ಘಟಕವನ್ನು ನಿರ್ಮಿಸಲು MGNREGA ರಡಿ ರೂ.29,000/-ಗಳಿಗೆ ಅಂದಾಜು ಮೊತ್ತವನ್ನು ನಿಗದಿಪಡಿಸಿದೆ.

-

2. ಕೇಂದ್ರ ಸರ್ಕಾರವು NBMMP ಕಾರ್ಯಕ್ರಮದಡಿ ರೂ.9000/-(SC Category ಗೆ ರೂ.11000/-) ಗಳ ಕೇಂದ್ರ ಸಹಾಯಧನ, ರೂ.1500/-ಗಳನ್ನು ಟರ್ನ್ ಕೀ ಫೀ ಮತ್ತು ಶೌಚಾಲಯ ಸಂಪರ್ಕಿತ ಜೈವಾನಿಲ ಸ್ಥಾವರಗಳಿಗೆ ರೂ.1200/-ಗಳಂತೆ ಪ್ರೋತ್ಸಾಹ ಧನವನ್ನು ನಿಗದಿಪಡಿಸಿದೆ. ಇದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ಸಹ ಸ್ಥಾವರ ಒಂದಕ್ಕೆ ರೂ.3500/-ಗಳನ್ನು ನಿಗದಿಪಡಿಸಿದೆ.

3. ಇದರಿಂದಾಗಿ ಘಟಕ ಒಂದಕ್ಕೆ ನಿಗದಿಪಡಿಸಿದ ಅಂದಾಜು ಮೊತ್ತ ರೂ.29000/- ಇದರಲ್ಲಿ ನಿಗದಿಪಡಿಸಿದ ಕೇಂದ್ರ ಹಾಗೂ ರಾಜ್ಯ ಸಹಾಯಧನ ಸೇರಿದಂತೆ ಒಟ್ಟಾರೆ ರೂ.12500/-ಗಳನ್ನು ಹೊರತುಪಡಿಸಿದಲ್ಲಿ ಉಳಿದ ರೂ.16500/-ಗಳ ಪೈಕಿ ನರೇಗಾ ಯೋಜನೆಯಡಿ ರೂ.12723/-(ಕೂಲಿ ಮೊತ್ತ ರೂ.7634/- ಮತ್ತು ಸಾಮಾಗ್ರಿ ಮೊತ್ತ ರೂ.5089/-) ಹಾಗೂ ರೂ.3777/-ಗಳನ್ನು ಫಲಾನುಭವಿಗಳು ಭರಿಸಬೇಕಿದೆ. ಇದಕ್ಕೆ ಸಂಬಂಧಿಸಿದ ಕಾಮಗಾರಿ ವಿವರಗಳನ್ನು **ಅನುಬಂಧದಲ್ಲಿ** ವಿವರಿಸಿದೆ.

4. ಈ ಸಹಭಾಗಿತ್ವದಡಿ NBMMP ಹಾಗೂ MGNREGA ಮಾರ್ಗಸೂಚಿಯನ್ನು ಪಾಲಿಸತಕ್ಕದ್ದು ಹಾಗೂ NBMMP ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್.ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸಾ.-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ :

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
3. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
4. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಉಪ ಕಾರ್ಯದರ್ಶಿ (ಅಭಿವೃದ್ಧಿ)/ಯೋಜನಾ ನಿರ್ದೇಶಕರು / ಮುಖ್ಯ ಲೆಕ್ಕಾಧಿಕಾರಿಗಳು.
5. ಎಲ್ಲಾ ಜಿಲ್ಲೆಯ ಜಿಲ್ಲಾ ಖಜಾನಾಧಿಕಾರಿಗಳು.
6. ವಿಶೇಷ ಅಧಿಕಾರಿ, ಗಣಕ ಕೋಶ, ಗ್ರಾಅಪಂ ಇಲಾಖೆ.

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)ರವರ ಆಪ್ತ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಆಂತರಿಕ ಆರ್ಥಿಕ ಸಲಹೆಗಾರರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ/ ಹೆಚ್ಚುವರಿ ಪ್ರತಿ.

## ಅನುಬಂಧ

**ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 91 ಜೈಅಯೋ 2016, ಬೆಂಗಳೂರು ದಿನಾಂಕ 09.11.2016ರ ಲಗತ್ತು.**

MGNREGA ಹಾಗೂ NBMMP ಯೋಜನೆಯಡಿ 3 CUM ದೀನಬಂದು ಮಾದರಿ ಜೈವಾನಿಲ ಸ್ಥಾವರ ಅನುಷ್ಠಾನ ಸಂಬಂದ ಅಂದಾಜು ವೆಚ್ಚದ Labour & Materials break up costs

(Ref:ಸಂಖ್ಯೆಗ್ರಾಅಪ/841/ಉಖಾಯೋ/2014, ದಿನಾಂಕ17/10/2016)

| ಕ್ರ.ಸಂ | ನಿರ್ವಹಿಸಬೇಕಾದ ಕೆಲಸಗಳು [Sequential line of actions] | MGNREGA ಅಡಿ ತೆಗೆದಿರಿಸಿದ ಅಂದಾಜು ಮೊತ್ತ ರೂ 12723/- break up costs | | NBMMP ಅಡಿ {ಸಹಾಯಧನ ರೂ12500/- ಮತ್ತು ಫಲಾನುಭವಿ ವಂತಿಕೆ ರೂ 3776/- = 16276/-} ರ break up costs Skilled Labour /Semiskilled Labour, Materials | ಒಟ್ಟು ರೂ ಗಳಲ್ಲಿ {[MGNREGA ಅಡಿ ತೆಗೆದಿರಿಸಿದ ಅಂದಾಜು ಮೊತ್ತ ರೂ 12723/- ] + {NBMMP ಅಡಿ ಸಹಾಯಧನ ರೂ12500/- ಮತ್ತು ಫಲಾನುಭವಿ ವಂತಿಕೆ ರೂ.3776/- = 16276/- ]}=29000/- |
|---|---|---|---|---|---|
| | | Labour [60%] | Materials [40%] | | |
| 1 | 2 | 3 | 4 | 5 | 6 |
| 1 | ಗುಂಡಿ ಅಗೆದು Drawing ಪ್ರಕಾರ ತಳವನ್ನು ಬಾಂಡಳಿ ಆಕಾರದಲ್ಲಿ ಅಗೆದು ಸಿದ್ಧಪಡಿಸುವದು | 4387/- | -- | -- | 4387/- |
| 2 | ತಳದಲ್ಲಿ ಬಾಂಡಳಿ ಆಕಾರದಲ್ಲಿ ಅಗೆದು ಸಿದ್ಧಪಡಿಸಿರುವುದಕ್ಕೆ PCC ಹಾಕುವುದು | 442/- | 2716/- | -- | 3158/- |
| 3 | Drawing ಪ್ರಕಾರ ಸರಿಯಾದ ಅಳತೆಗಳಿಗೆ Burnt Brick Masionry[BBM] ನಿರ್ಮಾಣ ಮಾಡುವುದು ಮತ್ತು ಸಾಮಗ್ರಿಗಳು Double burner 14-16 cft ISI marked gober gas stove,hose set fixtures,1/2dia.HDPE 7kgf/s.cm 100 feet pipe valves and fixtures ...etc ಒಳಗೊಂಡು ಜೋಡಿಸಿ ಸಿದ್ಧಪಡಿಸಿಕೊಳ್ಳುವುದು. | 809/- | 2373/- | 5782/- | 8964/- |
| 4 | Plastering ಮಾಡುವುದು | 1763/- | -- | 5975/- | 7738/- |
| 5 | RCC ಮಾಡುವುದು | 189/- | -- | 1415/- | 1604/- |
| 6 | Steel ಕೆಲಸ ಮಾಡುವುದು | 45/- | -- | 1376/- | 1421/- |
| 7 | ACC ಪ್ಲೇಟ್ | -- | -- | 100/- | 100/- |
| 8 | ಕ್ಯೂರಿಂಗ್ LS | -- | -- | 340/- | 340/- |
| 9 | Name Board ಅಳವಡಿಸುವುದು LS | -- | -- | 600/- | 600/- |
| 10 | 3 ಹಂತದಲ್ಲಿ Photo ತೆಗೆಯಲು LS | -- | -- | 415 | 415 |
| 11 | LS Supervision ವೆಚ್ಚ LS | -- | -- | 273/- | 273/- |
| | ಜುಮ್ಲಾ | 7635/- | 5089/- | 16276/- | 29000/- |

MGNREGA ರಡಿ ಜೈವಾನಿಲ ಸ್ಥಾವರ ಅನುಷ್ಠಾನಕ್ಕಾಗಿ T.K Worker / Project Engineer IREP ಅವರು ಗ್ರಾಮ ಪಂಚಾಯಿತಿ ಸಹಕಾರದೊಂದಿಗೆ ಅನುಷ್ಠಾನ ಕ್ರಮ ವಹಿಸುವುದು.

ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಲ್ಲಿ ತಾಂತ್ರಿಕ ವಿಧಿವಿಧಾನಗಳನ್ನು ಅನುಸರಿಸಿ (ಫಲಾನುಭವಿಯು ಜೈವಾನಿಲ ಸ್ಥಾವರ ನಿರ್ಮಿಸಲು ಜಾಗ ಹಾಗೂ ಜಾನುವಾರು ಹೊಂದಿದ್ದು, ಆಸಕ್ತಿ ಹೊಂದಿರಬೇಕು, ಜೊತೆಗೆ Job Card ಹೊಂದಿದ್ದರೆ ಉತ್ತಮ) ಸ್ಥಳೀಯ ಗ್ರಾಮ ಪಂಚಾಯಿತಿ ಮತ್ತು ಚುನಾಯಿತ ಪ್ರತಿನಿಧಿಗಳ ಸಹಕಾರದೊಂದಿಗೆ T.K Worker / Project Engineer IREP ರವರು ಫಲಾನುಭವಿಗಳನ್ನು ಗುರ್ತಿಸಿ ನಿಗದಿತ ನಮೂನೆಯಲ್ಲಿ ಫಲಾನುಭವಿಗಳ ವಿವರಗಳನ್ನು ನಿಗದಿತ ಅರ್ಜಿಗಳೊಂದಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ರವರ ಮುಖೇನ ಗ್ರಾಮ ಪಂಚಾಯತಿಗೆ ಕಳುಹಿಸುವುದು.

ಮುಂದುವರೆದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರು ಕಳುಹಿಸಿದ್ದ ಫಲಾನುಭವಿಗಳ ವಿವರಗಳ ಅರ್ಜಿಯನ್ನು ಗ್ರಾಮ ಪಂಚಾಯತ್ಗಳು ಕಾಮಗಾರಿಗಳ ವಿವರಗಳಿಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ, ಗ್ರಾಮ ಸಭೆ / ವಿಶೇಷ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು, ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಸಲ್ಲಿಸುವುದು. ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಿಯಾ ಯೋಜನೆಯನ್ನು ಅನುಮೋದಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರವರಿಗೆ ಮುಂದಿನ ಕ್ರಮ ಕೋರಿ ಸಲ್ಲಿಸುವುದು.

ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರವರು ಗ್ರಾಮ ಪಂಚಾಯಿತಿಗಳಿಗೆ ಈ ಕೆಳಕಂಡ ಅಗತ್ಯ ಕ್ರಮವಹಿಸಲು ಸೂಕ್ತ ನಿರ್ದೇಶನ ನೀಡುವುದು.

- ಯೋಜನಾ ಅಭಿಯಂತರರು IREP ರವರು ಕಾರ್ಯಕ್ರಮದ ಅನುಷ್ಠಾನದಲ್ಲಿ ರಚನಾತ್ಮಕವಾಗಿ ಕಾರ್ಯನಿರ್ವಹಿಸತಕ್ಕದ್ದು.
- ತಾಲ್ಲೂಕು ಅಧಿಕಾರಿಗಳ LOG IN ನಲ್ಲಿ Labour demand ಪಡೆದು ಕಾಮಗಾರಿ ಹಂಚಿಕೆ ಮಾಡಿ ಗ್ರಾಮ ಪಂಚಾಯಿತಿ e-NMR ಸೃಜಿಸಲು ಎಲ್ಲಾ ಅಗತ್ಯ ಕ್ರಮ ವಹಿಸುವುದು.
- ಗ್ರಾಮ ಪಂಚಾಯಿತಿ Engineer, T.K Worker ಅವರು ಸೈಟಿನಲ್ಲಿ ಜೈವಾನಿಲ ಸ್ಥಾವರ ನಿರ್ಮಾಣ ಮಾಡಲು Mark ಮಾಡುವುದು. ಈ ಸಮಯದಲ್ಲಿ ಫಲಾನುಭವಿ ಕಾಮಗಾರಿಯಲ್ಲಿ ಪಾಲ್ಗೊಂಡು, 1ನೇ ಹಂತದ GPS [Latitude-Longitude ನೊಂದಿಗೆ] Photo ತೆಗೆಯುವುದು. Earth work ಪೂರ್ಣಗೊಳಿಸುವುದು, ,ಅಗತ್ಯ ಸಾಮಗ್ರಿ ಒದಗಿಸಿಕೊಂಡು ನಂತರ T.K Worker ಅವರು ಒದಗಿಸುವ Master mession/Artisan ಅವರಿಂದ PCC ಮಾಡಿಸುವುದು,ನಂತರ ಅವರಿಂದ Drwaing ಪ್ರಕಾರ ಸರಿಯಾದ ಅಳತೆಗಳಿಗೆ Bumt Brick Masionry[BBM] ನಿರ್ಮಾಣ ಮಾಡುವುದು, Plastering ಮಾಡುವುದುಈಗ RCC ಮಾಡುವುದು,,Curing ಮಾಡುವುದು . ಫಲಾನುಭವಿ ಪಾಲ್ಗೊಂಡು ಈಗ 2ನೇ ಹಂತದ GPS [ ಅದೇ Latitude-Longitude ನೊಂದಿಗೆ] Photo ತೆಗೆಯುವುದು 1:1 ಪ್ರಮಾಣದಲ್ಲಿ ಸಗಣಿ ಮತ್ತು ನೀರಿನ Homogeneous slurry ಯನ್ನು ಜೈವಾನಿಲ ಸ್ಥಾವರದಲ್ಲಿ ತುಂಬಿಸಿ, ಸಾಮಗ್ರಿಗಳು Double burner 14-16 cft ISI marked gober gas stove,hose set fixtures,1/2dia.HDPE 7kgf/s.cm about 100 feet pipe valves and fixtures ...etc ಒಳಗೊಂಡು ಅಡುಗೆ ಮನೆಗೆ ಪರಿಪೂರ್ಣವಾಗಿ ಜೋಡಿಸುವುದು ಹಾಗೂ ಜೈವಾನಿಲ ಸ್ಥಾವರದ Out let ಅನ್ನು RCC Slab ನೊಂದಿಗೆ ಮುಚ್ಚುವುದು. ಅನಿಲ ಉತ್ಪಾದನೆ ಬಗ್ಗೆ ಖಾತರಿ ಪಡಿಸಿಕೊಂಡು ಜೈವಾನಿಲ ಸ್ಥಾವರ Commissioning ಮಾಡುವುದು. ಫಲಾನುಭವಿ ಪಾಲ್ಗೊಂಡು ಈಗ 3ನೇ ಹಂತದ GPS [ ಅದೇ Latitude-Longitude ನೊಂದಿಗೆ Photo ತೆಗೆಯುವುದು. Board ಅಳವಡಿಸುವುದು.
- ನಿಗದಿತ NBMMP ಸಹಾಯಧನದ ಅರ್ಜಿಯಲ್ಲಿನ ವಿವರಗಳನ್ನು ಭರ್ತಿಮಾಡಿ ಯೋಜನಾ ಅಭಿಯಂತರರು IREP ಹಾಗೂ PDO ಗ್ರಾಮ ಪಂಚಾಯತ್ ರವರು ಘಟಕಗಳು ಪರಿಪೂರ್ಣಗೊಂಡು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಕುರಿತಂತೆ ದೃಢೀಕರಿಸಿಬೇಕು. ದೃಢೀಕರಿಸಿದ ತರುವಾಯ PDO ಗ್ರಾಮ ಪಂಚಾಯತ್ ರವರು MGNREGA ರಡಿ ನಿಗದಿಪಡಿಸಿದ ಮೊತ್ತವನ್ನು ಮಾರ್ಗಸೂಚಿಯನ್ವಯ ಪಾವತಿಸುವುದು. ಸದರಿ ಎಲ್ಲಾ ಅರ್ಜಿಗಳನ್ನು NBMMP ರಡಿ ಕೇಂದ್ರ, ರಾಜ್ಯ ಹಾಗೂ ಟರ್ನ್ ಕೀ ಫೀಗಳನ್ನು GSK ಮುಖೇನ ಪಾವತಿಸಲು ಅನುಕೂಲವಾಗುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರವರಿಗೆ ಸಲ್ಲಿಸುವುದು.
- ಅಂತಿಮವಾಗಿ Project Engineer IREP ಅವರು GSK ಮುಖೇನ NBMMP [CA + SA ಒಳಗೊಂಡು] ಸಹಾಯಧನ ಹಾಗೂ T.K Fee ಪಾವತಿಸಲು ಎಲ್ಲಾ ಅಗತ್ಯ ಕ್ರಮ ವಹಿಸುವುದು. ಇದಕ್ಕೆ ಸಂಬಂಧಿಸಿದಂತೆ ಕಾರ್ಯಕ್ರಮದ ಮಾರ್ಗಸೂಚಿಯಲ್ಲಿ ತಿಳಿಸಲಾದಂತೆ ದಾಖಲಾತಿ ನಿರ್ವಹಣೆಯನ್ನು ವಿವರವಾಗಿ ಹಾಗೂ ಸಮರ್ಪಕವಾಗಿ ನಿರ್ವಹಿಸುವುದು.
- Project Engineer IREP ಅವರು ಕಾರ್ಯಕ್ರಮದ ಅನುಷ್ಠಾನದ ಪ್ರಾಥಮಿಕ ಹಂತದಿಂದ ಮುಕ್ತಾಯ ಹಂತದವರೆಗೆ (Turn key workers ಘಟಕಗಳ ನಿರ್ವಹಣೆ ಜವಾಬ್ದಾರಿ ಸೇರಿದಂತೆ) ನೇರವಾಗಿ ಹೊಣೆಗಾರರಾಗಿರುತ್ತಾರೆ.

ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.